

# ಇನ್ವರ್‌ನೆಸ್

## ಎ ಅಪರಿಚಿತ ಹಾದಿಯ ಅಸೀಮ ಸೌಂದರ್ಯ

**ನೆಸ್ ನದಿಯ ಸಾಂಗತ್ಯದಲ್ಲಿ ಹೆಜ್ಜೆ ಹಾಕುತ್ತಿರುವಂತೆ ಕಾಣುವ ಇನ್ವರ್‌ನೆಸ್; ಉತ್ತರ ಸ್ಕಾಟ್ಲೆಂಡ್‌ನ ಪುಟ್ಟ, ಸುಂದರ ನಗರ. ಅಲ್ಲಿನ ಮ್ಯೂಸಿಯಂಗಳು ಮನುಷ್ಯನ ಜ್ಞಾನದ ಹಸಿವನ್ನು ಹೆಚ್ಚಿಸುವ ಅಗಣಿತ ಬಿಂಬಗಳ ಸಂಕಲನದಂತಿವೆ.**

**■ ವಿನು ಗಂಗೆ**

ಸ್ಕಾಟ್ಲೆಂಡ್‌ನಲ್ಲಿ ಎರಡು ದಿನ ನಮ್ಮನ್ನು ಹೊತ್ತು ತಿರುಗಿದ್ದ ಪ್ರವಾಸಿ ಬಸ್, ಇನ್ವರ್‌ನೆಸ್ ನಗರದ ಮಧ್ಯೆ ನಮ್ಮನ್ನು ಇಳಿಸಿತು.

ಸ್ವಭಾವತಃ ಸ್ವತಂತ್ರ ಮನೋಭಾವದ ನಾನು ಮೊದಲ ಬಾರಿಗೆ ಆಯೋಜಿತ ಪ್ರವಾಸದ ಸರಹದ್ದಿನಲ್ಲಿ ಸಂತೋಷಪಡಲು ತಿಣುಕುತ್ತಿದ್ದೆ. ಗೊತ್ತಿಲ್ಲದಿದ್ದರೂ ಸರಿ, ನಮ್ಮ ದಾರಿ ನಮ್ಮ ಆಯ್ಕೆಯಾಗಿರಬೇಕು ಎಂಬುದು ಸದಾ ನನ್ನ ಒಳಮನಸ್ಸಿನ ತುಡಿತ.

ಅಂದು ಸ್ಕಾಟ್ಲೆಂಡ್ ಪ್ರವಾಸದ ಭಾಗವಾಗಿ ಇನ್ನೊಂದು ಕಡೆ ಹೋಗಲು ಹೆಚ್ಚಿನ ಪೌಂಡ್ ತೆರಬೇಕಾಗುತ್ತದೆ ಎಂದು ನಮ್ಮ ಬಸ್‌ನ ಗೈಡ್ ಹೇಳಿದಾಗ ಬಿಡುಗಡೆಗೆ ಅವಕಾಶ ಸಿಕ್ಕಂತೆನಿಸಿ, ಯಜಮಾನರನ್ನೊಪ್ಪಿಸಿ, 'ನಾವು ಬರುವುದಿಲ್ಲ, ಇನ್ವರ್‌ನೆಸ್ ನೋಡಿಕೊಂಡು ಇಲ್ಲೇ ಇದ್ದು ನೀವು ರಾತ್ರಿ ವಾಪಸ್ ಬಂದ ನಂತರ ಸೇರಿಕೊಳ್ಳುತ್ತೇವೆ' ಎಂದು ಗೈಡ್‌ಗೆ ಹೇಳಿದ್ದೆ. ಅದಕ್ಕೆ, ಬಸ್ ನಮ್ಮನ್ನು ನಗರದ ಮಧ್ಯೆ ಇಳಿಸಿ ಹೊರಟಿತ್ತು.

ಗೊತ್ತುಗುರಿ ಇಲ್ಲದ ಊರಲ್ಲಿ ಸಣ್ಣ ಮಗಳು, ಆಗ ತಾನೇ ಓದು ಮುಗಿಸಿದ ಮಗನೊಡನೆ ನಗರದ ನಡುವಿನ ವೃತ್ತದಲ್ಲಿ ನಿಂತಾಗ ಯಜಮಾನರಿಗೆ ಸ್ವಲ್ಪ ಅಭದ್ರತೆ ಕಾಡಿರಬೇಕು. 'ದುಡ್ಡು ಉಳಿಸಲು ನೀನು ಎಂಥ ಕೆಲಸ ಮಾಡಿದೆ ನೋಡು, ಎಲ್ಲರ ಜೊತೆ ನಾವೂ ಹೋಗಬಹುದಿತ್ತು' ಎಂದು ಆರೋಪಿಸಲು ಮೊದಲು ಮಾಡಿದರು.

ನಾನು ಪಿಯುಸಿ ಓದುವಾಗ ನಮ್ಮ ಪಠ್ಯದಲ್ಲಿ ಒಂದು ಕವನವಿತ್ತು. **'The Road not Taken'** ಎಂದು ಅದರ ಹೆಸರು. ಕವಿ, ರಾಬರ್ಟ್ ಫ್ರಾಸ್ಟ್. ಆ ಕವನದಲ್ಲಿ ಅವನು ಎಲ್ಲರೂ ನಡೆದ ಹಾದಿಯನ್ನು ಆಯ್ಕೆ ಮಾಡದೆ ಹೆಚ್ಚು ಜನರು ನಡೆಯದ, ಗುರುತಿರದ ಹಾದಿ ಆಯ್ಕೆ ಮಾಡಿದಾಗ ಒಳ್ಳೆಯ ಬದಲಾವಣೆ ತಂದಿತು ಎಂದು ಜೀವನದ ಆಯ್ಕೆಗಳಿಗೆ ಸಮೀಕರಿಸಿ ಹೇಳುತ್ತಾನೆ. ಇದು ಆಗ ನನ್ನ ಮನಮುಟ್ಟಿದ ಕವನ. ಈ ಕವನದ ಕಾರಣಕ್ಕೋ ಅಥವಾ ಮತ್ತೊಂದೋ, ನಾನು ಕೂಡ ಇಂಥ ಆಯ್ಕೆಗಳನ್ನೇ ಮಾಡುತ್ತೇನೆ.

'ದುಡ್ಡು ಉಳಿಸಲು ಅಲ್ಲ, ಕವಿ ರಾಬರ್ಟ್ ಫ್ರಾಸ್ಟ್‌ನ ಮನೋಭಾವ ನನ್ನದು, ಅದಕ್ಕಾಗಿ ಹೀಗೆ ಮಾಡಿದೆ' ಎಂದು ರಸ್ತೆ ಮಧ್ಯೆ ನನ್ನವರಿಗೆ ಅರ್ಥ ಮಾಡಿಸಲು ಹೋಗಲಿಲ್ಲ. ಸುಮ್ಮನೆ ರಸ್ತೆ ಬದಿ ನಿಂತು ಅಲ್ಲಿನ ಸ್ಥಳಗಳ ಅಂತರ್ಜಾಲ



ನಗರದ ಮಧ್ಯೆ ಪ್ರಶಾಂತವಾಗಿ ಹರಿಯುವ ನೆಸ್